ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್ ಕನ್ನಡಾನುವಾದ : ಕೆ.ಎಂ.ಹೆಗಡೆ ಮತ್ತು ಮಂಜುನಾಥ ಭಾಗವತ

## ಜೈ ಗುರುದೇವ

(ಜುಲೈ ಸಂಚಿಕೆಯಿಂದ ಮುಂದುವರೆದುದು)

೧೭೭.ಆ ತೇಜವಲಿ ವಿಷ್ಣು ಶಕ್ತಿಯನು ಭರಿಸಿ ।
ಆ ಶಿಶುವು ಭಾರವಾಗುತ್ತಿರಲು ಗ್ರಹಿಸಿ ॥

೧೭೮.ಬಲುಭಾರವೆನಿಸುತಿದೆಯಲ್ಲ ಈ ಮಗುವು ।
ಮಲಗಿಸುವೆ ಮೊರದ ಮೇಲೆಂದೆಣಿಸಿ ಅವಳು॥

೧೭೯.ಮೇಲುಹಾಸನು ಹಾಸಿ ಮಲಗಿಸಲು ಮಗುವ ।
ಸೀಳಿ ಆ ಮೊರವಾದುದಲ್ಲಿ ಇಬ್ಭಾಗ ॥

೧೮೦.ಆ ಪರಿಯ ಕಂಡು ಕಂಗಾಲಾಗಿ ತಾಯಿ ।
ವಿತರ್ಕಿ ಉತ್ಪಾತವೆಂದಳುಕಿ ಮನದಿ ॥

೧೮೧.ಬಂಡೆಗಿಂತಲು ಭಾರವಾಯ್ತೇಕೆ ಮಗುವು ।
ಆಶ್ಚರ್ಯಕರ ಮಗುವು ಶಾಂತವಾಗಿಹುದು ॥

೧೮೨.ಮೇಲೆತ್ತಿ ಆಡಿಸುವೆನೆಂದು ಯತ್ನಿಸಲು ।
ಬಾಲಕನ ಭಾರಕೋಸುಗ ಚಿಂತಿಸಿದಳು ॥

೧೮೩.ಹಲವಾರು ಬಾರಿ ಯತ್ನಿಸಿ ವಿಫಲಳಾಗಿ ।
ಮರುಗಿದಳು ಆ ತಾಯಿ ಭಗ್ನಾಶಳಾಗಿ ॥

೧೮೪.ಹರಹರಾ ಈ ಮಗುವ ನಾನೆತ್ತಲಾರೆ ।
ಮೊರವೆ ಸೀಳಾಯ್ತಲ್ಲ ಕಂಡೆಕಣ್ಣಾರೆ ॥

೧೮೫.ತರಳನಿಂಗೇನಾಯ್ತೊ ಎಂದು ಚೀರಿದಳು ।
ನೆರೆಹೊರೆಯ ಜನ ಓಡಿಬಂದು ನೋಡಿದರು ॥

೧೮೬.ಯಾಕಳುವೆ ಏನಾಯಿತೆಂದು ಕೇಳಿದರೆ ।
ಈ ಮಗುವು ಯಾತಕೋ ಭಾರವಾಯ್ತರರೆ ॥

೧೮೭.ಏಕೆಂದು ನಾನರಿಯೆನೆಂದು ದುಃಖಿಸಲು ।
ಆಲೋಚಿಸುತಲವರು ಇಂತು ಪೇಳಿದರು ॥

೧೮೮.ಆ ಬೇವಿನಾಮರದಿ ದೆವ್ವವೊಂದಿಹುದು ।
ಆಗಾಗ ತಾನೆದ್ದು ಕಾಟ ನೀಡುವುದು ॥

೧೮೯.ಭೂತಚೇಷ್ಟೆಯ ಬಿಡಿಸುವವನ ಕರೆತನ್ನಿ ।
ಈಗಲೀಕ್ಷಣ ಪೋಗಿರೆಂದು ಗಡಬಡಿಸೆ ॥

೧೯೦.ಮಾಟಗಾರನು ಬಂದು ನೋಡಿ ಹೂಂಕರಿಸಿ ।
ಬಿಡು ತೊಲಗು ನಡೆಹೋಗು ಎಂದು ಅಬ್ಬರಿಸಿ ॥

೧೯೧.ಉಚ್ಚಾಟನೆಯ ಮಂತ್ರ ಜಪಿಸಲಾಕ್ಷಣದಿ ।
ಹಗುರವಾಯಿತು ಮಗುವು ಮೊದಲಿನಂದದಲಿ ॥

೧೯೨.ತಾಯಿ ಮಗುವನು ತೊಡೆಯಳಿಟ್ಟು ಆಡಿಸಲು ।
ಪೀಡೆ ಕಳೆಯಿತು ಎನುತ ಸರಿದರೆಲ್ಲವರು ॥

೧೯೩.ಇನ್ನೊಂದು ದಿನ ಶಿಶುವ ಮಲಗಿಸುತ ಮಾತೆ ।
ತನ್ನ ಹೊಣೆಯರಿತು ಮಾಡುತಿರೆ ಮನೆವಾರ್ತೆ ॥

೧೯೪.ಹಾಸುಗೆಯ ಸನಿಹದೊಳಗೊಂದು ಒಲೆಯಿತ್ತು ।
ಬೆಂಕಿಯೇನಿರಲಿಲ್ಲ ಬೂದಿ ತುಂಬಿತ್ತು ॥

೧೯೫.ಮೂರು ತಿಂಗಳ ಮಗುವು ಉರುಳಿ ಒಲೆಯೆಡೆಗೆ ।
ಹೊರಳಲರ್ಧ ಶರೀರ ತೂರಲದರೊಳಗೆ ॥

೧೯೬.ಚಂದ್ರಕಾಂತಿಯ ತನುವ ಬೂದಿಮುಸುಕಿದುದು ।
ಬೈರಾಗಿಯಂತೆ ಕಂಗೊಳಿಸಲಾ ಮಗುವು ॥

೧೯೭.ಅದ ಕಂಡು ನಮ್ಮಜ್ಜಿ ತಾನೋಡಿ ಬಂದು ।
ಹುಡುಗನುರುಳಿದನಲ್ಲ ಬೂದಿಯೊಳಗೆಂದು ॥

೧೯೮.ಬಿಸಿತಾಗಿತೋ ಎಂದು ಬೊಬ್ಬೆಯನ್ನಿಟ್ಟು ।
ಮಗುವಿನಾ ಮೈಕೊಡವಿ ತಾನೆತ್ತಿಕೊಳಲು ॥

೧೯೯.ಭಾಸವಾಯಿತು ಮಗುವು ಬೈರಾಗಿಯಂತೆ ।
ಏಸೊಂದು ಬೆಳೆಯಿತೀ ಶಿಶುವೆಂಬ ಚಿಂತೆ ॥

೨೦೦.ಘಾಸಿಗೊಂಡವರಂತೆ ಕರೆದಳಾ ಧನಿಯ ।
ಬಾರಿಲ್ಲಿ ನೋಡು ನೀನಿಲ್ಲಾದ ಬಗೆಯ ॥

೨೦೧.ಹಾಸುಗೆಯ ಮೇಲೆ ಶಿಶುವನು ಮಲಗಿಸಿರ್ದೆ ।
ಆ ಸುಟ್ಟ ಒಲೆಯೊಳಗೆ ನುಸುಳಿತದು ಹೇಗೆ ॥

೨೦೨.ಯಾರು ಮಗುವನ್ನೆತ್ತಿ ಒಲೆಯೊಳಿಟ್ಟವರು ।
ಈ ಎತ್ತರಕೆ ಬೆಳೆದುದೆಂತು ಈ ಶಿಶುವು ॥

೨೦೩.ಮತ್ತಾವ ಕಾಟವೋ ಎಂದು ಅಳುತಿರಲು ।
ಇತ್ತ ಕೊಡಿರಾ ಶಿಶುವನೆಂದಳಾ ಧನಿಯು ॥

೨೦೪.ಅಶುಭವನು ಚಿಂತಿಸುವಿರೇಕೆ ನೀವಿಂತು ।
ಒಲೆಯ ಬೂದಿಯ ಕಡೆಗೆ ತಾನುರುಳಿ ಹೋಯ್ತು॥

೨೦೫.ಮಗುವಿಗೇನಾಗದಂದದಿ ಬಳಿದೆ ದೃಷ್ಟಿ ।
ದಿಗಿಲುಗೊಳ್ಳುವಿರೇಕೆ ಎಂದು ಸಂತೈಸಿ ॥

೨೦೬.ಆವುದೋ ಮಂತ್ರಜಪಗೈದಳಾ ಧನಿಯು ।
ತಾ ಮರಳಿ ಶಿಶುವ ತಾಯ್ಗಿತ್ತು ತೆರಳಿದಳು ॥

೨೦೭.ಯಾರವಳು ಗುರುದೇವನವತಾರದಲ್ಲಿ ।
ತಾನೊದಗಿ ಬಂದಳೆ ಯಶೋದೆಯೇ ಇಲ್ಲಿ ॥

೨೦೮.ನಂದಗೋಕುಲವಾಯ್ತೆ ಕಾಮಾರಪುಕುರ ।
ತಿಳಿಯದಲ್ಲಾ ನಮಗೆ ಆ ಧನಿಯ ವಿವರ ॥

೨೦೯.ಲೀಲಾವಿನೋದಿ ಗುರುವರನ ಚರಿತೆಯಲಿ ।
ಯುಗಯುಗಾಂತರದ ಕಲ್ಪನೆ ಬಹುದು ಮರಳಿ ॥

೨೧೦.ಧನಿಯಂಥ ಮಹಿಳೆಯರ ಬಳಗವು ಅಮೋಘ ।
ಗುರುಕರುಣೆಯಿಂದಲಿದು ತಿಳಿವುದಾಗಾಗ ॥